ಜಿ.ಸ.ನಾ. ಹೊಸಪೇಟೆ
ದಾರಿಯಲ್ಲಿ ಹೋಗುವಾಗ ಬೆಕ್ಕು ಅಡ್ಡ ಬಂದರೆ ಅಪಶಕುನ. ಬೆಕ್ಕು ಓವರ್ ಟೇಕ್ ಮಾಡಿದರೆ?



ನಿಮ್ಮ ಮಂಡಿನೋವು ಹೆಚ್ಚಾಗಿ ಚಲನೆ/ಚಾಲನೆ ಕುಲಗೆಟ್ಟಿದೆ ಎಂದರ್ಥ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಎಲ್ಲದಕ್ಕೂ ಸಾವುಂಟು. ಆದರೆ ಸಾವಿಗೆ ಸಾವಿಲ್ಲವೇ ಸಾರ್?
ಇದೆಯಲ್ಲ; ಸಾವಿನ ಸಾವೇ ಹುಟ್ಟು.

ಸುಮನಾ. ತೆಲಂಗಾಣ
ಕೊರೊನಾ ಕಾಲಕ್ಕಿಂತ ಕಲಿಗಾಲ ಎಷ್ಟೋ ವಾಸಿ ಅಲ್ಲವೆ?
ಹಾಗೆನ್ನಲಾಗದು. ಕಲಿಗಾಲದಲ್ಲಿ ಕಳೆದುಹೋಗಿದ್ದ ಶಿಸ್ತು ಕೊರೋನಾ ಕಾಲದಲ್ಲಿ ಮರಳಿದೆ.

ವಿ. ಹೇಮಂತಕುಮಾರ್, ಬೆಂಗಳೂರು
ಕೆಲವರಿಗೆ ಹಿತ್ತಾಳೆ ಕಿವಿ ಇರತ್ತೆ ಅಂತಾರೆ. ನಿಜಾನಾ ರಾಮ್?



ನಿಜ. ಅನ್ಯರ ಹಿತ ತಾಳದವರ ಮಾತುಗಳನ್ನು ಕೇಳುವ ಕಿವಿಯೇ ಹಿತ್ತಾಳೆ ಕಿವಿ.

ಅನಸೂಯ ಟಿ, ಕೇದಿಗೆಮನೆ
ಮನಸ್ಸು ಮಾಡಿದರೆ ಎಲ್ಲವೂ ಸಾಧ್ಯ ಎನ್ನುತ್ತಾರೆ. ಮನಸ್ಸು ಮಾಡುವುದು ಎಂದರೆ?
ಮಾ (ಬೇಡ) ಇಂದ ಜಂ (ಸಾಧಿಸು) ಕಡೆಗೆ ಸಾಗುವುದೇ ಮನಸ್ಸು 'ಮಾಡು'ವುದು.

ಪಿ.ಜೆ. ರಾಘವೇಂದ್ರ, ಮೈಸೂರು
ಅಂಚೆ ಕಾರ್ಡಿನಿಂದ ಮಿಂಚಂಚೆಗೇರಲು ಕೊರೊನಾ ನೆಪವಾಯಿತೆ?
ಊಹೂಂ. ಪ್ರಶ್ನೆಕೋವಿದರ ಒರತೆಯ ನಿರಂತರತೆಗೆ ಮಿಂಚಂಚೆ ಆದ್ಬಾಂಧವ.

ಸುಲೋಚನ ಜಿ. ರಾವ್, ಬೆಂಗಳೂರು
ಹುಟ್ಟುತ್ತಾ ಅಣ್ಣತಮ್ಮಂದಿರು; ಬೆಳೆಯುತ್ತಾ ದಾಯಾದಿಗಳು. ವಯಸ್ಸಾದ ಮೇಲೆ?
ರುಂಡ ಹೋಗಿ ಪಿಂಡ ಇಡುವಾಗ ಪರಿತಪಿಸುವರು.

ಬಿದರಹಳ್ಳಿ ಚೆನ್ನವೀರಪ್ಪ, ಹಿರೇಹಡಗಲಿ
ಡಿವಿಜಿಯವರ ಮಂಕುತಿಮ್ಮನಿಗೂ, ಬೀಚಿಯವರ ತಿಂಮನಿಗೂ ಇರುವ ವ್ಯತ್ಯಾಸವೇನು?
ಮಂಕುತಿಮ್ಮ ನಗಸಾಲೆ; ತಿಂಮ ನಗೆಸಾಲೆ.

ತಲಕಾಡು ಶ್ರೀನಿಧಿ, ಬೆಂಗಳೂರು
ಒಳ್ಳೆಯ ಮಾತು ಆಡಬಹುದಾದಾಗ ಮೌನವಾಗಿದ್ದು, ಮೂದಲಿಸಲು ಮಾತ್ರ ಮಾತನಾಡುವವರನ್ನು ಏನೆನ್ನುವಿರಿ?
ಪೇಯ್ಡ್ ನ್ಯೂಸ್ ಚಾನಲ್.

ವಿದ್ಯಾ ಎನ್. ಪೈ, ಹೊನ್ನಾವರ
ಪುಸ್ತಕಗಳಿಗೆ ಒಳ್ಳೆಯ ತೂಕ ಬರುವುದು ಯಾವಾಗ?
ಓದುಗರು ನೆನೆದಾಗ ಅಥವಾ ನೀರಿನಲ್ಲಿ ನೆನೆದಾಗ.

ಕಣ್ಣೂರು ಗೋವಿಂದಾಚಾರಿ, ಮೈಸೂರು
ಅಂಥ ಪುರುಷರನ್ನು ವರಿಸುವ ಸ್ತ್ರೀಯರಿದ್ದಾರೆ. ಅಂಥ ಸ್ತ್ರೀಯರನ್ನು ವರಿಸುವ ಪುರುಷರಿಲ್ಲವಲ್ಲಾ...?
ಕೊಂಚ ತಾಳಿ. ಸ್ತ್ರೀಯರ ಅನುಪಾತ ಹೀಗೆಯೇ ಇಳಿದರೆ ಅಂಥಳೂ ದ್ರೌಪದಿಯಾದಾಳು.

ಟಿ.ಎಂ. ಮಾನಪ್ಪ, ಶಿವಮೊಗ್ಗ
ದೇವಾಲಯಗಳಿಗೂ, ಅನಾಥಾಲಯಗಳಿಗೂ ವ್ಯತ್ಯಾಸವೇನು?
ದೇವಾಲಯದಲ್ಲಿ ಮನುಷ್ಯತ್ವ ಇದ್ದರೆ ಸಾಕು; ಅನಾಥಾಲಯದಲ್ಲಿ ದೈವತ್ವವೇ ಇರಬೇಕು.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು
'ಸುರಾಪಾನ ಸಂಸಾರ ಪತನ' ಎನ್ನುವ ಸರ್ಕಾರವೇ ಮದ್ಯ ಮಾರಾಟಕ್ಕೆ ಆದ್ಯತೆ ನೀಡಿತಲ್ಲಾ....?
'ಮಜಾಪ್ರಭುತ್ವದಿಂದ ಪ್ರಜಾಪ್ರಭುತ್ವ' ಎನ್ನುವುದು ಅವರ ಲೇಟೆಸ್ಟ್ ಸ್ಲೋಗನ್ ಅಂತೆ.

## ಬಹುಮಾನಿತ ಪ್ರಶ್ನೆ

ಕೆ.ಎಂ. ವಿಭೂತಿ, ಹರಿಹರ
ಎಲ್ಲ ಪ್ರಮುಖ ದಿನಗಳನ್ನು ಆಚರಿಸುವ ನಾವು ವಿಶ್ವ ಅತ್ತೆ ದಿನ, ವಿಶ್ವ ಸೊಸೆಯಂದಿರ ದಿನ ಏಕೆ ಆಚರಿಸುತ್ತಿಲ್ಲ?
ಅತ್ತೆ ದಿನದಂದು ಸೊಸೆ, ಸೊಸೆಯ ದಿನದಂದು ಅತ್ತೆ ಸಂಪು, ಹರತಾಳ, ನಿರಶನ ಹೂಡುವ ಭೀತಿ ಇರುವುದರಿಂದ.

ಕಾವ್ಯಶ್ರೀ ಪತ್ರಿಮಠ, ಶೋರಾಪುರ
ಸ್ವಧರ್ಮ ಯಾವುದು? ಪರಧರ್ಮ ಯಾವುದು?
ಮೆರೆಸುವುದು ಸ್ವಧರ್ಮ; ಸಹಿಸುವುದು ಪರಧರ್ಮ.

ಆರ್ಶೆ ಹಾದಿಮನಿ, ಧಾರವಾಡ
ಕಾನೂನು ಕಡಿಮೆ ಇದ್ದಷ್ಟೂ ಆಡಳಿತ ಸರಳ ಎಂಬ ಚಾಣಕ್ಯನೀತಿ ಸರಿಯೆ?
'ಗುಪ್ತ'ರ ಆಳ್ವಿಕೆಗಂತೂ ಸರಿ; ಇಂದಿನದೂ ಪಾರದರ್ಶಕತೆ ಇಲ್ಲದ 'ಗುಪ್ತ'ರ ಆಳ್ವಿಕೆಯೇ.

ಬಿ.ಎನ್. ನರಸಿಂಹಮೂರ್ತಿ, ಚೆನ್ನೈ
ಲಾಕ್‌ಡೌನ್ ಸಮಯದಲ್ಲಿ ಗಂಡಸರು ಅಡುಗೆ ಕಲಿಯುತ್ತಾರೆ. ಹೆಂಗಸರು ಏನು ಕಲಿಯಬೇಕು?



ತಿಂದು ಕೆಟ್ಟ ಹೊಟ್ಟೆಗೆ 'ಮನೆಮದ್ದು' ಮಾಡುವುದನ್ನು.

ಎನ್ನೆಸ್ ಮಹಾಬಲರಾವ್, ಎನ್ನಾರ್ಪುರ
ಜಾಯಿಂಟ್ ಫ್ಯಾಮಿಲಿ ಎಂದರೆ ಗಂಡ ಹೆಂಡತಿ...?
ಅದೂ joy ಮತ್ತು int(erest) ಇರುವವರೆಗೆ ಮಾತ್ರ.

ಆರ್. ಮಧುಸೂದನ್, ಹಾಸನ
ಶಟಲ್ ಕಾಕ್ ಆಟದ ಅಂಕಗಳನ್ನು 'ಲವ್' ಇಂದ ಆರಂಭಿಸುವುದೇಕೆ?
ಬಲೆಯಲ್ಲಿ/ಬುಟ್ಟಿಯಲ್ಲಿ ಕೆಡವಿಕೊಂಡು ಗೆಲ್ಲುವ ಎಲ್ಲ ಆಟದಲ್ಲೂ 'ಲವ್' ಇರಲೇಬೇಕು.

ಪ್ರಶ್ನೆಗಳನ್ನು ಕಳುಹಿಸಿ
editorsu@sudha.co.in

■ ರಾಮ್